# ‘ಶ್ರೀರಾಮಕೃಷ್ಣ ವಚನವೇದ’
# ಭಾವಧಾರೆ - 46

ಸ್ವಾಮಿ ನಿತ್ಯಸ್ಥಾನಂದ

ಇದೇ ರೀತಿ ವಿಚಾರಪರವಾದ ಒಂದು ಶ್ಲೋಕ ಶ್ರೀ ವಿದ್ಯಾರಣ್ಯರ ‘ಪಂಚದಶಿ’ಯಲ್ಲಿ ಬರುತ್ತದೆ:

**ಶಬ್ದ ಸ್ಪರ್ಶಾದಯೋ ವೇದ್ಯಾ ವೈಚಿತ್ರ್ಯಾಜ್ಜಾಗರೇ ಪೃಥಕ್ ।**
**ತತೋ ವಿಭಕ್ತಾ ತತ್ಸಂವಿದೈಕರೂಪ್ಯಾನ್ನ ಭಿದ್ಯತೇ ॥** *(೧.೩)*

‘‘ಎಚ್ಚರದಲ್ಲಿ ನಮಗೆ ವೇದ್ಯವಾದ ಶಬ್ದಸ್ಪರ್ಶಗಳೇ ಮೊದಲಾದವು, ತಮ್ಮ ವಿಶಿಷ್ಟ ಗುಣಗಳಿಂದಾಗಿ, ಪರಸ್ಪರ ಬೇರೆಬೇರೆಯಾಗಿರುವುವು. ಇವುಗಳನ್ನು ಅರಿಯುವ ಚೈತನ್ಯವಾದರೂ (ಸಂವಿತ್) ಇವುಗಳೆಲ್ಲದರಿಂದ ಬೇರೆಯಾಗಿದ್ದು, ತಾನು ಬದಲಾಗದೆ, ಒಂದೇ ರೂಪದಲ್ಲಿರುತ್ತದೆ.’’ ಅದೂ ಬದಲಾಗುತ್ತಿದ್ದರೆ ಯಾವುದೇ ನಿರ್ದಿಷ್ಟ ಜ್ಞಾನವುಂಟಾಗಲೂ ಸಾಧ್ಯವಾಗುವುದಿಲ್ಲ. ಕಣ್ಣು ಒಂದೇ ಆಗಿದ್ದು ವಿವಿಧ ವಸ್ತುಗಳನ್ನು ನೋಡುತ್ತದೆ. ಮನಸ್ಸು ಒಂದೇ ಆಗಿದ್ದು ಕಣ್ಣು ಮತ್ತು ವಿವಿಧ ಇಂದ್ರಿಯಗಳ ವೈಚಿತ್ರ್ಯಗಳನ್ನು ಅರಿಯುತ್ತದೆ. ಸಾಕ್ಷೀಚೈತನ್ಯವು (ಸಂವಿತ್) ಒಂದೇ ಆಗಿದ್ದು ವೈವಿಧ್ಯಮಯ ಮನೋವೃತ್ತಿಗಳನ್ನು ಗ್ರಹಿಸುತ್ತದೆ. ಈ ರೀತಿ ವಿಚಾರದಿಂದ ವೈರಾಗ್ಯವೂ, ವೈರಾಗ್ಯದಿಂದ ಇಂದ್ರಿಯಸಂಯಮವೂ ಉಂಟಾಗುತ್ತದೆ. ಈ ರೀತಿ ಸಂಯಮವುಳ್ಳವನು ಆಮೆಯಂತಿರುತ್ತಾನೆ ಎನ್ನುತ್ತಾರೆ ಶ್ರೀರಾಮಕೃಷ್ಣರು. ಭಗವದ್ಗೀತೆಯಲ್ಲಿಯೂ ಸ್ಥಿತಪ್ರಜ್ಞನ ಲಕ್ಷಣವನ್ನು ವಿವರಿಸುವಾಗ ಇದೇ ಉದಾಹರಣೆಯನ್ನು ನಿಡಲಾಗಿದೆ:

**ಯದಾ ಸಂಹರತೇ ಚಾಯಂ ಕೂರ್ಮೋಽಂಗಾನೀವ ಸರ್ವಶಃ ।**
**ಇಂದ್ರಿಯಾಣೀಂದ್ರಿಯಾರ್ಥೇಭ್ಯಃ ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥**
*(ಗೀತೆ, ೨.೫೮)*

‘‘ಯಾವಾಗ ಒಬ್ಬನು ಆಮೆಯು (ಅಪಾಯದ ಸಂದರ್ಭದಲ್ಲಿ) ತನ್ನ ಅಂಗಗಳನ್ನು ಒಳಗೆ ಸೆಳೆದುಕೊಳ್ಳುವಂತೆ ಇಂದ್ರಿಯ ವಿಷಯಗಳಿಂದ ತನ್ನ ಇಂದ್ರಿಯಗಳನ್ನು ಸೆಳೆದುಕೊಳ್ಳಬಲ್ಲನೊ ಆಗ ಅವನ ಪ್ರಜ್ಞೆಯು ಸ್ಥಿರವಾಗುತ್ತದೆ.’’ ಆಮೆಯು ತನ್ನ ಚಿಪ್ಪಿನೊಳಗೆ ಸುರಕ್ಷಿತವಾಗಿರುವಂತೆ ಅವನು ಆತ್ಮಪ್ರಜ್ಞೆಯೊಳಗೆ ಸುರಕ್ಷಿತನಾಗಿರುತ್ತಾನೆ. ಸಮುದ್ರಮಥನದ ಸಮಯದಲ್ಲಿ ಕೂರ್ಮವು ಮಂದರ ಪರ್ವತವನ್ನು ಹೊತ್ತು ಅಲ್ಲೋಲ ಕಲ್ಲೋಲವನ್ನು ಸಹಿಸಿದಂತೆ ಸ್ಥಿತಪ್ರಜ್ಞನೂ ಜೀವನದ ಏರುಪೇರುಗಳನ್ನು ಸಹಿಸಬಲ್ಲ.



## ಪ್ರತಿಮಾ ಪೂಜೆ

**ಶ್ರೀರಾಮಕೃಷ್ಣರು:** ‘‘ತಂದೆಯ ಭಾವಚಿತ್ರ, ತಂದೆಯನ್ನು ಜ್ಞಾಪಕಕ್ಕೆ ತರುವಂತೆ, ಪ್ರತಿಮಾ ಪೂಜೆ ಮಾಡುತ್ತ ಮಾಡುತ್ತ ಮುಂದುವರಿದರೆ ಸತ್ಯದ ರೂಪ ಉದ್ದೀಪನವಾಗುತ್ತದೆ.

‘‘ಸಾಕಾರ ರೂಪ ಹೇಗೆ ಗೊತ್ತೆ? ಜಲರಾಶಿಯ ಮಧ್ಯದಿಂದ ಗುಳ್ಳೆಗಳು ಏಳುವಂತೆ, ಮಹಾ ಚಿದಾಕಾಶದಿಂದ ಒಂದೊಂದು ಭಗವದ್ರೂಪ ಏಳುವುದನ್ನು ನೋಡಬಹುದು. ಅವತಾರ ಈ

ರೂಪಗಳಲ್ಲಿ ಒಂದು. ಅವತಾರ ಲೀಲೆ ಆ ಆದ್ಯಾಶಕ್ತಿಯ ಕ್ರೀಡೆಯೇ.'' *(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು.೧೪೧)*

ಗುಳ್ಳೆಗಳು ಗಾಳಿಯಿಂದ ಏಳುತ್ತವೆ. ಒಳಗಡೆ ಗಾಳಿ ಅಧಿಕವಾದರೆ ಗುಳ್ಳೆ ಒಡೆದು ಹೋಗುತ್ತದೆ. ಹಾಗೆಯೇ ಭಕ್ತಿಯಿಂದಾಗಿ ಭಗವದ್ರೂಪಗಳು ಕಾಣಿಸಿಕೊಳ್ಳುತ್ತವೆ, ಭಕ್ತಿಯ ತೀವ್ರತೆಯಿಂದಾಗಿ ಆಕಾರವು ಮಾಯವಾಗಿ ನಿರಾಕಾರವೊಂದೇ ಉಳಿಯುತ್ತದೆ. ಭಕ್ತಿಯು ಇನ್ನೂ ಅಪಕ್ವಾವಸ್ಥೆಯಲ್ಲಿರುವಾಗ ಆಕಾರವು ಆವಶ್ಯಕ, ಮತ್ತು ಆಕಾರದ ಪೂಜೆಯೂ ಆವಶ್ಯಕ. ಎಲ್ಲ ಧರ್ಮಗಳಲ್ಲಿಯೂ ಒಂದಲ್ಲ ಒಂದು ರೀತಿಯಲ್ಲಿ ಆಕಾರದ ಪೂಜೆಯು ಇದ್ದೇ ಇರುತ್ತದೆ. ಸಂಸ್ಕೃತ ಶ್ಲೋಕವೊಂದಿದೆ:

**ಪ್ರಥಮಾ ಪ್ರತಿಮಾ ಪೂಜಾ ಜಪಸ್ತೋತ್ರಾದಿ ಮಧ್ಯಮಾ ।**
**ಉತ್ತಮಾ ಮಾನಸೀ ಪೂಜಾ ಸೋಽಹಂಭಾವೋತ್ತಮೋತ್ತಮಾ ॥**

''ಪ್ರಾರಂಭದಲ್ಲಿ ಪ್ರತಿಮಾ ಪೂಜೆ; ಅದಕ್ಕಿಂತ ಮೇಲಿನವು ಜಪ, ಸ್ತೋತ್ರ ಇತ್ಯಾದಿಗಳು; ಉತ್ತಮವಾದುದು ಭಗದ್ರೂಪವನ್ನು ಧ್ಯಾನಿಸುವುದು; ಮತ್ತು ಅತ್ಯುತ್ತಮವಾದುದು 'ನಾನೇ ಅವನು' ಎಂದು ಭಾವಿಸುವುದು.'' ಈ ಅತ್ಯುತ್ತಮ ಸ್ಥಿತಿಯಲ್ಲಿ, **'ಅಕ್ರಿಯಾ ಏವ ಪರಾಪೂಜಾ ಮೌನಮೇವ ಪರೋ ಜಪಃ'**– 'ಏನೂ ಮಾಡದಿರುವುದೇ ಅತ್ಯುತ್ಕೃಷ್ಟ ಪೂಜೆ. ಮೌನವೇ ಅತ್ಯುತ್ಕೃಷ್ಟ ಜಪ.'

ಭಗವದರ್ಪಣ ಭಾವವನ್ನು ಬೆಳೆಸಿಕೊಳ್ಳುವುದೇ ಪೂಜೆ (Worshipful attitude). ಆದ್ದರಿಂದ ಭಗವತ್ ಸೇವಾರೂಪದಲ್ಲಿ ಮಾಡುವ ಎಲ್ಲ ಕೆಲಸಗಳೂ ಪೂಜೆಯೇ. ಮನುಷ್ಯನ ಮೂಲ ಸ್ವಭಾವ ಪಡೆಯುವುದು — ತನಗೆ ಅದು ಬೇಕು ಇದು ಬೇಕು ಎನ್ನುವ ಪ್ರವೃತ್ತಿ. ಈ ಪ್ರವೃತ್ತಿಯನ್ನು ಭಗವನ್ಮುಖಿಗೊಳಿಸಿದಾಗ ಅದು ಪ್ರಾರ್ಥನೆಯಾಗುತ್ತದೆ. ನಾವು ನೀಡುವ ಹಂತಕ್ಕೆ ತಲುಪಿದಾಗ ಪೂಜೆ ಪ್ರಾರಂಭವಾಗುತ್ತದೆ. ಈ ಭಾವ ಇಲ್ಲದ ಪೂಜೆ ಅವನತಿಗೆ ಒಯ್ಯುತ್ತದೆ. ಪೂಜೆ ಪಡೆಯುವುದಕ್ಕಾಗಿ ಆದಾಗ, ಅದೊಂದು ವ್ಯಾಪಾರವಾಗುತ್ತದೆ. ಪೂಜೆಯ ಮೂಲಕ ಭಗವಂತನನ್ನು ಸಮೀಪಿಸುವ ಬದಲು ಆತನಿಂದ ದೂರ ಸರಿಯುತ್ತೇವೆ. ಆಗ ಆಂಗ್ಲಭಾಷೆಯ ಹೇಳಿಕೆ ಸತ್ಯವಾಗುತ್ತದೆ:

'The nearer to church, the farther from God' (ಚರ್ಚನ್ನು ಸಮೀಪಿಸಿದಷ್ಟೂ ದೇವರಿಂದ ದೂರವಾಗುತ್ತೇವೆ.) ಇಲ್ಲಿ ಚರ್ಚ್ ಎಂದರೆ ಭಗವದ್ಧ್ಯಾನವಿಲ್ಲದ ಕ್ರಿಯಾವಿಧಿಗಳು.

### ಪೂಜೆಯ ಮುಖ್ಯಾಂಶಗಳು

೧) **ಅರ್ಪಣೆ:** ಅರ್ಪಣೆ (Sacrifices) ರಹಿತ ಪೂಜೆ ಇರಲಾರದು. ಅರ್ಪಣೆ ಎಂದರೆ ಏನನ್ನೂ ಅಪೇಕ್ಷಿಸದೆ ನೀಡುವುದು. ಇನ್ನೊಂದು ಅರ್ಥ ಆತ್ಮಾರ್ಪಣೆ – ಅಹಂಕಾರ ಶಮನ. ಬುದ್ಧನಿಗೆ ಸಂಬಂಧಿಸಿದ ಒಂದು ಕಥೆ: ಅನೇಕ ಭಕ್ತರು ಬೆಲೆಬಾಳುವ ವಸ್ತುಗಳನ್ನು ತೆಗೆದುಕೊಂಡು ಹೋಗಿ ಬುದ್ಧನಿಗೆ ಅರ್ಪಿಸುತ್ತಿದ್ದರು. ಒಬ್ಬ ಮುದುಕಿ, ಭಿಕ್ಷುಕಿ, ತನ್ನಲ್ಲಿ ಬುದ್ಧನಿಗೆ ಅರ್ಪಿಸಲು ಏನೂ ಇಲ್ಲವಲ್ಲ ಎಂದು ಪರಿತಪಿಸುತ್ತಿದ್ದಳು. ಭಿಕ್ಷೆಯಿಂದ ದೊರೆತ ಪುಡಿಗಾಸಿನಿಂದ ಹೇಗೋ ಒಂದು ಹಣತೆಯನ್ನು ಗಿಟ್ಟಿಸಿಕೊಂಡಳು, ಒಂದು ಅಂಗಡಿಗೆ ಹೋಗಿ ಬೇಡಿ ಸ್ವಲ್ಪ ಎಣ್ಣೆಯನ್ನೂ ಪಡೆದಳು. ತನ್ನ ಬಟ್ಟೆಯ ಒಂದು ತುಂಡನ್ನೇ ಬತ್ತಿಯನ್ನಾಗಿ ಉಪಯೋಗಿಸಿ, ಆ ಹಣತೆಯನ್ನು ಹಚ್ಚಿ ಬುದ್ಧನ ಮುಂದೆ ತಂದಿರಿಸಿದಳು. ರಾತ್ರಿಯಾದ ಮೇಲೆ ಎಲ್ಲ ದೀಪವನ್ನು ಆರಿಸುವ ಸಮಯ. ಶಿಷ್ಯನೊಬ್ಬನು ಬಂದು ಎಲ್ಲ ದೀಪವನ್ನು ಆರಿಸಿದನು. ಆದರೆ ಎಷ್ಟೇ ಪ್ರಯತ್ನಿಸಿದರೂ ಆ ಹಣತೆಯನ್ನು ಮಾತ್ರ ಆರಿಸಲಾಗಲೇ ಇಲ್ಲ. ಮುಗುಳ್ನಗುತ್ತ ಇದನ್ನುನೋಡುತ್ತಿದ್ದ ಬುದ್ಧನು ಹೇಳಿದನು: ''ನೀನದನ್ನು ಆರಿಸಲಾರೆ. ಆ ಪರಮ ಭಕ್ತೆ ತನ್ನ ಜೀವವನ್ನೇ ತೈಲವಾಗಿ ಸುರಿದು ಅದನ್ನು ಹತ್ತಿಸಿರುವಳು.'' ಇದು ನಿಜವಾದ ಅರ್ಪಣೆ.

೨) **ಆರಾಧನೆ** (adoration): ಗೌರವ ತುಂಬಿದ ಪ್ರೀತಿ. ಭಗವಂತನ ಮಹಿಮೆಯನ್ನು ಅರಿತು ಅವನಲ್ಲಿ ಪ್ರೀತಿಪೂರ್ವಕ ಭಕ್ತಿ ಗೌರವವನ್ನು ಬೆಳೆಸಿಕೊಳ್ಳುವುದು.

೩) **ಪರಿಶುದ್ಧತೆ:** ಅನೇಕ ಬಗೆಯ ಶುದ್ಧೀಕರಣ ಪೂಜೆಯ ಸಂದರ್ಭದಲ್ಲಿ ನಡೆಯುತ್ತದೆ.

೪) **ಇಷ್ಟನಿಷ್ಠೆ** (cult): ವಿವಿಧ ದೇವದೇವತೆಗಳಿಗೆ ಸಂಬಂಧಿಸಿದಂತೆ ವಿವಿಧ ಬಗೆಯ ಪೂಜಾವಿಧಾನಗಳಿರುತ್ತವೆ. ಆಯಾಯ ಭಕ್ತರು ಆ ಪೂಜಾವಿಧಾನಗಳನ್ನು ಅನುಸರಿಸುತ್ತಾರೆ. (ಪೂಜೆಗೆ ಸಂಬಂಧಪಟ್ಟ ಮೇಲಿನ ಭಾವನೆಗಳು ಸ್ವಾಮಿ ಭಜನಾನಂದರ 'ಆಧ್ಯಾತ್ಮಿಕ ಸಾಧನೆಯಾಗಿ ಪೂಜೆ' ಎಂಬ ಲೇಖನದಿಂದ). ಸ್ವಾಮಿ ಭಜನಾನಂದರು ಹೇಳುತ್ತಾರೆ:

''ಒಂದು ಆಧ್ಯಾತ್ಮಿಕ ಸಾಧನೆಯಾಗಿ ಪೂಜೆಯ ಮುಖ್ಯ ಉದ್ದೇಶವೇನೆಂದರೆ ಉನ್ನತ ಧ್ಯಾನಕ್ಕೆ ಮನಸ್ಸನ್ನು ಸಿದ್ಧಗೊಳಿಸುವುದು. ಇಚ್ಛೆಗೆ ಉತ್ತಮ ತರಬೇತಿ, ದೇವತೆಯೊಂದಿಗೆ ನಿಕಟ ಸಂಬಂಧವನ್ನು ಕಲ್ಪಿಸುವುದು. ಮನಸ್ಸನ್ನು ಪರಿಶುದ್ಧಗೊಳಿಸುವುದು – ಇವು ಪೂಜೆಯಿಂದಾಗಬೇಕಾದ ಪರಿಣಾಮಗಳು.''

## ೮. ದಕ್ಷಿಣೇಶ್ವರದಲ್ಲಿ ಶ್ರೀರಾಮಕೃಷ್ಣರ ಜನ್ಮಮಹೋತ್ಸವ

### ಭಗವಂತನ ವಿವಿಧ ಆವಿರ್ಭಾವಗಳು

'ಶ್ರೀರಾಮಕೃಷ್ಣ ಪರಮಹಂಸರು ಕಲ್ಕತ್ತದ ಹತ್ತಿರವಿರುವ ಬೇಲಘರದ ಗೋವಿಂದ ಮುಖ್ಯೋಪಾಧ್ಯಾಯನ ಮನೆಗೆ ಬಂದಿದ್ದಾರೆ. ನರೇಂದ್ರ, ರಾಮ ಇವರೇ ಮೊದಲಾದ ಭಕ್ತರೂ ಅಲ್ಲದೆ ಗೋವಿಂದನ ನೆರೆಹೊರೆಯವರೂ ಬಂದು ಸೇರಿದ್ದಾರೆ. ಇಲ್ಲಿಗೆ ಬಂದ ಸ್ವಲ್ಪ ಹೊತ್ತಿನ ಮೇಲೆ ಪರಮಹಂಸರು ನರೇಂದ್ರನೇ ಮೊದಲಾದವರೊಡನೆ ಹಾಡು, ನರ್ತನ ಮಾಡಿದರು. ಕೀರ್ತನೆ

ಮುಗಿದ ನಂತರ ಎಲ್ಲರೂ ಕುಳಿತುಕೊಂಡಿದ್ದಾರೆ. ಈಗ ಅನೇಕರು ಒಬ್ಬೊಬ್ಬರಾಗಿ ಎದ್ದು ಬಂದು ಪರಮಹಂಸರಿಗೆ ಪ್ರಣಾಮ ಮಾಡುತ್ತಿದ್ದಾರೆ. ಪರಮಹಂಸರು ಹೇಳುತ್ತಿದ್ದಾರೆ: ''ನನಗೇಕೆ? ಭಗವಂತನಿಗೆ ಪ್ರಣಾಮ ಮಾಡಿ.'' '

**ಶ್ರೀರಾಮಕೃಷ್ಣರು:** ''ಭಗವಂತನೇ ಎಲ್ಲವೂ ಆಗಿದ್ದಾನೆ. ಆದರೆ ಕೆಲವು ವಸ್ತುಗಳಲ್ಲಿ ಮಾತ್ರ ವಿಶೇಷವಾಗಿ ವ್ಯಕ್ತವಾಗಿದ್ದಾನೆ. ಉದಾಹರಣೆಗೆ ಸಾಧುಗಳಲ್ಲಿ. ಹಾಗಾದರೆ ದುಷ್ಟರಿದ್ದಾರಲ್ಲ, ಹುಲಿಸಿಂಹಗಳಿದ್ದಾವಲ್ಲ ಎಂಬುದಾಗಿ ನೀನು ಕೇಳಬಹುದು. ಹೌದು, ನಿಜ. ಆದರೆ 'ಹುಲಿ' ಭಗವಂತನನ್ನು ಆಲಿಂಗಿಸಲು ಯತ್ನಿಸಬಾರದು. ದೂರದಿಂದಲೇ ಅದಕ್ಕೆ ಪ್ರಣಾಮ ಮಾಡಿ ಹೊರಟುಬಂದುಬಿಡಬೇಕು. ಉದಾಹರಣೆಗೆ ನೀರನ್ನು ತೆಗೆದುಕೊ. ಕೆಲವು ನೀರನ್ನು ಕುಡಿಯಬಹುದು. ಇನ್ನು ಕೆಲವನ್ನು ಪೂಜೆಗೆ ವಿನಿಯೋಗಿಸಬಹುದು ಮತ್ತೆ ಕೆಲವನ್ನು ಸ್ನಾನಕ್ಕೆ ಉಪಯೋಗಿಸಬಹುದು. ಮತ್ತೂ ಕೆಲವನ್ನು ಮುಸುರೆ ತೊಳೆಯುವುದಕ್ಕೆ ಮಾತ್ರ ಉಪಯೋಗಿಸಬಹುದು.'' *(ಅಲ್ಲೇ, ಪು.೧೪೩)*

ವಿದ್ಯುತ್ ಶಕ್ತಿಯು ಬೇರೆ ಬೇರೆ ಕಡೆ ಬೇರೆ ಬೇರೆ ರೂಪದಲ್ಲಿ ವ್ಯಕ್ತವಾಗುತ್ತದೆ. ಬಲ್ಬಿನಲ್ಲಿ ಬೆಳಕಾಗಿಯೂ, ಸ್ಟೌನಲ್ಲಿ ಶಾಖವಾಗಿಯೂ, ಫ್ಯಾನ್‌ನಲ್ಲಿ ಚಲನೆಯಾಗಿಯೂ ವ್ಯಕ್ತವಾಗುತ್ತದೆ. ಅದೇ ರೀತಿಯಲ್ಲಿ ಭಗವಂತನೂ ವಿವಿಧರೂಪಗಳಲ್ಲಿ ವ್ಯಕ್ತನಾಗಿದ್ದಾನೆ. ಹುಲಿಯ ರೂಪದಲ್ಲಿ ಇರುವವನೂ ಅವನೇ. ಹುಲಿಯು ನಮಗೆ ಕ್ರೂರವಾಗಿ ಕಾಣಿಸಬಹುದು, ಆದರೆ ಮರಿಗೆ ಪ್ರೀತಿಯ ತಾಯಿಯಾಗಿ ಕಾಣಿಸುತ್ತದೆ. ಮಾನವನು ಪ್ರಾಣಿಗಳಿಗೆ ಅತ್ಯಂತ ಕ್ರೂರಮೃಗವಾಗಿ ಕಾಣಿಸಬಹುದು. ಒಂದು ಗ್ರಂಥದಲ್ಲಿ ತುಂಬ ಭಯಾನಕವಾಗಿ ಕಾಣುವ ಒಂದು ಪ್ರಾಣಿಯ ಭಾವಚಿತ್ರವಿತ್ತು. ಅದರ ಕೆಳಗೆ ಬರೆದಿತ್ತು: 'Most ferocious animal next only to man' (ಮನುಷ್ಯನನ್ನು ಬಿಟ್ಟರೆ ಅತ್ಯಂತ ಭೀಕರ ಪ್ರಾಣಿ.) ಒಬ್ಬ ಕಳ್ಳನೂ ಭಗವಂತನೇ ನಿಜ. ಆದರೆ ಅವನನ್ನು ಹೇಗೆ ಪೂಜಿಸಬೇಕು? ಸ್ವಾಮಿ ಅಶೋಕಾನಂದರು ಹೇಳುತ್ತಾರೆ: ಅವನನ್ನು ದ್ವೇಷಿಸದೆ, ಪೂಜ್ಯಭಾವದಲ್ಲಿಯೇ ಅವನನ್ನು ಹಿಡಿದು ಪೊಲೀಸರಿಗೆ ಒಪ್ಪಿಸಬೇಕು!

ಭಾಗವತದಲ್ಲಿ ಬರುವ ಒಂದು ಪ್ರಸಿದ್ಧ ಶ್ಲೋಕ:

**ಅಥ ಮಾಂ ಸರ್ವಭೂತೇಷು ಭೂತಾತ್ಮಾನಂ ಕೃತಾಲಯಮ್।**
**ಅರ್ಹಯೇತ್ ದಾನಮಾನಾಭ್ಯಾಂ ಮೈತ್ರ್ಯಾಽಭಿನ್ನೇನ ಚಕ್ಷುಷಾ ॥**

''ಎಲ್ಲ ಪ್ರಾಣಿಗಳಲ್ಲಿಯೂ ಅವುಗಳ ಆತ್ಮವನ್ನೇ ಆಲಯವಾಗಿ ಮಾಡಿಕೊಂಡು ನೆಲೆಸಿರುವ ನನ್ನನ್ನು (ಭಗವಂತನನ್ನು) ಅಭಿನ್ನ ದೃಷ್ಟಿಯಿಂದ, ಮೈತ್ರೀಭಾವದಿಂದ ದಾನಮಾನಾದಿಗಳ ಮೂಲಕ ಅರ್ಚಿಸಬೇಕು.''

**ಶ್ರೀರಾಮಕೃಷ್ಣರು:** ''ವೇದಾಂತವಾದಿಗಳು ಹೇಳುತ್ತಾರೆ 'ಸೋಽಹಂ' ಎಂದರೆ 'ನಾನೇ ಭಗವಂತ', ಬ್ರಹ್ಮಸತ್ಯಂ, ಜಗನ್ಮಿಥ್ಯಾ. 'ನಾನು' ಎಂಬುದೂ ಮಿಥ್ಯಾ. ಕೇವಲ ಆ ಪರಬ್ರಹ್ಮ ಮಾತ್ರ ಸತ್ಯ.''

''ಬ್ರಹ್ಮ ಸತ್ಯಂ ಜಗನ್ಮಿಥ್ಯಾ, ಜೀವೋ ಬ್ರಹ್ಮೈವ ನಾಽಪರಃ'' – ಇದು ಅದ್ವೈತ ವೇದಾಂತದ ಘೋಷಣೆ. ಜಗತ್ತು ಬದಲಾಗುತ್ತಿರುವ ಸತ್ಯ (Changing reality). ಬದಲಾಗುತ್ತಿರುವುದು ಯಾವುದು ಎಂದು ವಿಶ್ಲೇಷಿಸುತ್ತ ಹೋದರೆ ಏನೂ ಸಿಗುವುದಿಲ್ಲ. ಆದ್ದರಿಂದಲೇ ಜಗತ್ತನ್ನು ಮಿಥ್ಯೆ ಎಂದು ಕರೆಯುವುದು. 'ಈ ಬದಲಾವಣೆಯ ಜಗತ್ತಿನಲ್ಲಿ ಬದಲಾವಣೆಯೊಂದೇ ಸತ್ಯ' ಎಂದು ಸಾಮಾನ್ಯವಾಗಿ ಹೇಳುತ್ತಾರೆ. ಜಗತ್ತು ಮಿಥ್ಯೆ ಎಂದು ಹೇಳಲಾಗಿದೆಯೇ ಹೊರತು, 'ಅಸತ್ಯ' ಎಂದು ಹೇಳಿಲ್ಲ. ಅಸತ್ಯವಾದದ್ದು ನಮ್ಮ ಅರಿವಿಗೆ ಬರುವುದಕ್ಕೇ ಸಾಧ್ಯವಿಲ್ಲ. ಆದರೆ ಜಗತ್ತು ನಮ್ಮ ಅರಿವಿಗೆ ಬರುತ್ತಿದೆ. ಆದರೆ ಪಾರಮಾರ್ಥಿಕ ಅನುಭವವಾದಾಗ ಅದು ಇಲ್ಲವಾಗುತ್ತದೆ. ಆದ್ದರಿಂದ ಅದನ್ನು ಮಿಥ್ಯೆ ಎಂದು ಕರೆಯಲಾಗಿದೆ – ಸತ್ಯವೂ ಅಲ್ಲದ, ಅಸತ್ಯವೂ ಅಲ್ಲದ ಮಧ್ಯದ ಸ್ಥಿತಿ. ಇದೊಂದು ತೋರಿಕೆಯ ಜಗತ್ತು. ಪಾರಮಾರ್ಥಿಕವಾಗಿ ಇಲ್ಲ. ಇಲ್ಲದಿರುವುದು ಹೇಗೆ ತೋರಿಕೊಳ್ಳುತ್ತದೆ? ಇದೇ ಮಾಯೆ.

**ಶ್ರೀರಾಮಕೃಷ್ಣರು:** ''ಆದರೆ 'ಅಹಂ' ಎಂಬುದು ಹೋಗುವುದಿಲ್ಲವಾದ್ದರಿಂದ 'ನಾನು ಭಗವಂತನ ದಾಸ, ಭಗವಂತನ ಪುತ್ರ, ಭಗವಂತನ ಭಕ್ತ' ಎಂಬ ಭಾವ ಒಳ್ಳೆಯದು.

''ಕಲಿಯುಗಕ್ಕೆ ಭಕ್ತಿಯೋಗವೇ ಶ್ರೇಯಸ್ಕರವಾದದ್ದು. ಭಕ್ತಿಯಿಂದಲೇ ಆತನ ಸಾಕ್ಷಾತ್ಕಾರವನ್ನು ಪಡೆದುಕೊಳ್ಳಬಹುದು. ದೇಹಬುದ್ಧಿ ಇತ್ತು ಎಂದರೆ, ವಿಷಯ ಬುದ್ಧಿ ಇದ್ದೇ ಇರುತ್ತದೆ. ರೂಪ, ರಸ, ಗಂಧ, ಸ್ಪರ್ಶ, ಶಬ್ದ – ಇವೇ ವಿಷಯಗಳು. ವಿಷಯಬುದ್ಧಿ ಹೋಗಬೇಕಾದರೆ ಬಹಳ ಕಷ್ಟ. ವಿಷಯಬುದ್ಧಿ ಇರುವವರೆಗೆ 'ಸೋಽಹಂ' ಭಾವ ಉಂಟಾಗದು.'' *(ಅಲ್ಲೇ, ಪು.೧೪೩)*

**(ಮುಂದುವರಿಯುವುದು)**

## ಸತ್ಯ ಮತ್ತು ಆಧ್ಯಾತ್ಮಿಕತೆ

ಆಧ್ಯಾತ್ಮಿಕ ವ್ಯಕ್ತಿಯಾಗಲು ಮೊದಲು ಮಾಡಬೇಕಾದ ಕಾರ್ಯವೇ ಸತ್ಯಸಂಧನಾಗಿರುವುದು. ಎಂದಿಗೂ ಸತ್ಯವನ್ನು ಬಿಡಬೇಡ, ಜೀವನಪರ್ಯಂತ ಇದನ್ನು ಪಾಲಿಸು. ಸತ್ಯವೇ ದೇವರು; ಯಾರು ಸತ್ಯನಿಷ್ಠೆಯಿಂದ ಇರುವರೋ ಅವನಿಗೇ ದೇವರು ಒಲಿಯುವನು. ಯಾರು ಮಾತು, ಮನಸ್ಸು, ಕಾರ್ಯಗಳಲ್ಲಿ ಸತ್ಯವನ್ನು ಪಾಲಿಸಲಾರನೋ ಅವನೆಂದಿಗೂ ಆಧ್ಯಾತ್ಮಿಕ ಮಾರ್ಗದಲ್ಲಿ ನಡೆಯಲಾರ. ಇದನ್ನು ಮಾಡದಿದ್ದರೆ ಎಲ್ಲ ಕೆಲಸಗಳೂ ವ್ಯರ್ಥ.

— ಸ್ವಾಮಿ ಪ್ರೇಮಾನಂದ